ದಿ: ೦೪.೧೨.೨೦೨೧ ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು**: ಆರೋಪಿ ಪರ ಶ್ರೀ ಎ.ಸಿ.ಎಸ್. ವಕೀಲರಿಂದ

ದಿ: ೨೫.೦೬.೨೦೦೩ ರಲ್ಲಿ ನನ್ನ ಮದುವೆ ೧ನೇ ಆರೋಪಿಯೊಂದಿಗೆ ಮಾಲೂರಿನಲ್ಲಿ ಆಗಿರುತ್ತದೆ. ನಮ್ಮದ್ದು ಅರೆಂಜ್ ಮ್ಯಾರೇಜ್ ಅಂದರೆ ಸರಿ. ನನ್ನ ಗಂಡ ಕೆ.ಎಸ್.ಆರ್.ಟಿ.ಸಿ ಡ್ರೈವರ್ ಕಮ್ ಕಂಡಕ್ಟರ್ ಆಗಿದ್ದರು. ನನ್ನ ಗಂಡ ಸರ್ಕಾರಿ ನೌಕರ ಆಗಿದ್ದರಿಂದ ನಮ್ಮ ಮನೆಯವರು ಒಪ್ಪಿಕೊಂಡು ಮದುವೆ ಮಾಡಿದರು ಎಂದರೆ ಸರಿಯಲ್ಲ. ನಾವು ಮದುವೆಯಾದ ನಂತರ ಒಂದು ವರ್ಷ ಚಿಕ್ಕತಗ್ಗಲ್ಲಿ ಹಳ್ಳಿಯಲ್ಲಿ ವಾಸವಿದ್ದೇವು. ಆಗ ನಾನು ನನ್ನ ಗಂಡ ಚೆನ್ನಾಗಿದ್ದೇವು ಎಂದರೆ ಸರಿ. ಮದುವೆಯಾದ ಒಂದು ವರ್ಷದ ನಂತರ ಮಾಸ್ತಿಯಲ್ಲಿ ವಾಸವಾಗಿದ್ದೇವು. ಆಗ ನನ್ನ ಗಂಡ ಖಾಸಗಿ ಬಸ್ಸಿನಲ್ಲಿ ಚಾಲಕನಾಗಿದ್ದರು. ನನ್ನ ಗಂಡ ಮಸ್ತಿಯಲ್ಲಿ ಕೆಲಸ ಮಾಡುತ್ತಿದ್ದರಿಂದ ನಾವು ಅಲ್ಲೆ ವಾಸ ಮಾಡುತ್ತಿದ್ದೇವು ಎಂದರೆ ಸರಿ. ಅಲ್ಲಿ ಒಂದು ವರ್ಷ ಇದ್ದೇವು. ಮದುವೆಯಾದ ಒಂದು ವರ್ಷ ಎರಡು ತಿಂಗಳಿಗೆ ನಮಗೆ ಮಗು ಜನಿಸಿತು. ನಂತರ ಮಾಸ್ತಿಯಿಂದ ಮತ್ತೆ ಚಿಕ್ಕತಗ್ಗಲ್ಲಿ ಹಳ್ಳಿಗೆ ಮರಳಿ ಬಂದೆವು. ನಾನು ಗರ್ಭಿಣಿ ಆಗಿದ್ದಾಗ ಚಿಕ್ಕತಗ್ಗಲ್ಲಿಗೆ ಬಂದಿದ್ದೇವು. ಹೆರಿಗೆ ಆದ ನಂತರ ನಾನು ಮತ್ತೆ ಚಿಕ್ಕತಗ್ಗಲ್ಲಿಯಲ್ಲಿ ಇದ್ದೇನು. ನನ್ನ ಹೆರಿಗೆ ನನ್ನ ತಾಯಿ ಮನೆಯಲ್ಲಿ ಆಗಿದೆ. ಹೆರಿಗೆಯ ಖರ್ಚು ನನ್ನ ಗಂಡನ ಮನೆಯವರು ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಹೆರಿಗೆ ನಂತರ ನಾನು ಚಿಕ್ಕತಗ್ಗಲ್ಲಿಯಲ್ಲಿ ಮೂರು ವರ್ಷ ಇದ್ದೇ. ನಂತರ ನಾನು ಮಾಲೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದೇ. ಆಗ ನನ್ನ ಗಂಡ ಮತ್ತು ನಾನು ಮಾಲೂರಿನಲ್ಲಿ ವಾಸವಿದ್ದೇವು.

ನನ್ನ ಗಂಡನ ತಂದೆ ತಾಯಿ ಅವರ ಜೊತೆ ಇದ್ದುದ್ದರಿಂದ ಮತ್ತು ನನಗೂ ಅವರಿಗೆ ಹೊಂದಾಣಿಕೆ ಆಗದ ಕಾರಣ ನನ್ನ ಹೇಳಿಕೆ ಮೇರೆಗೆ ಮಾಸ್ತಿ ಮತ್ತು ಮಾಲೂರಿನಲ್ಲಿ ನನ್ನ ಗಂಡ ಮನೆ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಪ್ರತಿನಿತ್ಯ ನನ್ನ ಗಂಡನಿಗೆ ಬೇರೆ ಮನೆ ಮಾಡುವಂತೆ ಒತ್ತಾಯ ಮಾಡುತ್ತಿದ್ದೇ ಎಂದರೆ ಸರಿಯಲ್ಲ. ಚಿಕ್ಕತಗ್ಗಲಿ ಹಳ್ಳಿಯಲ್ಲಿ ನಾವು ಒಂದನೆ ಮಹಡಿಯಲ್ಲಿ ವಾಸಿಸುತ್ತಿದ್ದೇವು ಎಂದರೆ ಸರಿ, ಸಾಕ್ಷಿಯು ಮುಂದುವರೆದು ನನ್ನ ಗಂಡನ ತಂದೆ ತಾಯಿ ಅವರು ಸುನಿತಾ ಬಾಯಿ ಎನ್ನುವವರನ್ನು ತಮ್ಮ ಮನೆಯಲ್ಲಿ ಇರಿಸಿಕೊಂಡಿದ್ದು, ಗಲಾಟೆ ಆಗುತ್ತಿದ್ದುದ್ದರಿಂದ ತಾವು ಬೇರೆ ಮಹಡಿಯಲ್ಲಿ ಇದ್ದೇವು ಎಂದು ಹೇಳಿರುತ್ತಾರೆ. ಸುನಿತಾ ಬಾಯಿ ಅವರನ್ನು ೧ನೇ ಆರೋಪಿ ಅವರು ಇಟ್ಟುಕೊಂಡಿದ್ದರು ಎಂದು ದೂರಿನಲ್ಲಿ ಬರೆಸಿದ್ದೇನೆ ಮನೆಯಲ್ಲಿ ಇಟ್ಟಿಕೊಂಡಿದ್ದರು ಎಂದು ಬರೆಸಿಲ್ಲ. ೭ನೇ ಆರೋಪಿಯ ವಿರುದ್ದ ಸುಳ್ಳು ಆರೋಪ ಮಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಹೆಸರಿಗೆ ಜಮೀನು ಮಾಡಿಕೊಂಡು ಎಂದು ಒತ್ತಾಯ ಮಾಡುತ್ತಿದ್ದೇ ಎಂದರೆ ಸರಿಯಲ್ಲ. ನನ್ನ ಮಗನ ಹೆಸರಿಗೆ ಜಮೀನು ಮಾಡಿಕೊಡಿ ಎಂದು ಒತ್ತಾಯ ಮಾಡುತ್ತಿದ್ದೇ ಎಂದರೆ ಸರಿಯಲ್ಲ. ಅದಕ್ಕೆ ನನ್ನ ಗಂಡ ಜಮೀನು ಅವರ ತಂದೆ ಹೆಸರಿಗೆ ಇರುವುದಾಗಿ ಹೇಳಿದ್ದರಿಂದ ನಾನು ಜಗಳ ಮಾಡುತ್ತಿದ್ದೇ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆರೋಪಿ ನಂ.೧ ರಿಂದ ೩ ಮತ್ತು ೬,೭ ಪರ ವಕೀಲರು ತನಗೆ ರಾಜಿ ಮಾಡಿಕೊಳ್ಳುವಂತೆ ಒತ್ತಾಯ ಮಾಡುತ್ತಿದ್ದರು ಎನ್ನುತ್ತಾರೆ. ನಾನು ವಕೀಲರ ವಿರುದ್ದ ಸುಳ್ಳು ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಾವ ದಿ: ೧೨.೦೩.೨೦೧೪ ರಂದು ನನ್ನ ವಿರುದ್ದ ಒಂದು ದೂರು ನೀಡಿದ್ದರು ಎಂದರೆ ಸರಿಯಲ್ಲ. ನನ್ನ ಮಾವ ನನ್ನ ವಿರುದ್ದ ನಾನು ಪ್ರತಿನಿತ್ಯ ಗಲಾಟೆ ಮಾಡುತ್ತೇನೆ ಎಂದು ಒಂದು ದೂರು ನೀಡಿದ್ದರು ಎಂದರೆ ಸರಿಯಲ್ಲ. ನಂತರ ನಾನು ಪೊಲೀಸ್ ಠಾಣೆಗೆ ಹಾಜರಾಗಿ ಚೆನ್ನಾಗಿ ಇರುತ್ತೇನೆ ಎಂದು ಮುಚ್ಚಳಿಕೆ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿನಿತ್ಯ ಆರೋಪಿತರ ವಿರುದ್ದ ಗಲಾಟೆ ಮಾಡುತ್ತಿದ್ದೆ, ಮತ್ತು ಅವರನ್ನು ಕೆರಳಿಸುತ್ತಿದ್ದೇ ಎಂದರೆ ಸರಿಯಲ್ಲ. ನಾನು ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಅರ್ಜಿಯನ್ನು ನೀವು ವಾಪಸ್ಸು ಪಡೆದಿದ್ದೀರಾ ಎಂದರೆ ಸಾಕ್ಷಿಯು ತನಗೆ ಒತ್ತಾಯ ಮಾಡಿಸಿ, ವಾಪಸ್ಸು ಪಡೆಸಿದ್ದಾರೆ ಎಂದು ಹೇಳಿರುತ್ತಾರೆ. ಆ ಕುರಿತು ನಾನು ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ. ಸಾಕ್ಷಿಯು ಮುಂದುವರೆದು ತಮ್ಮ ವಕೀಲರಿಗೆ ಹೇಳಿರುವುದಾಗಿ ಎಂದು ಹೇಳಿರುತ್ತಾರೆ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಿಡಿಪಿಓ ಮುಂದೆ ರಾಜಿ ಬರೆದುಕೊಟ್ಟಿದ್ದೇನೆ ಎಂದರೆ ಸಾಕ್ಷಿಯು ಒತ್ತಾಯ ಮಾಡಿ ಬರೆಸಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ನಾನೇ ಸ್ವಂತ ಇಚ್ಚೆಯಿಂದ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಮನೆಯವರೇ ಖರ್ಚು ಭರಿಸಿ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಗೆ ಮದುವೆ ಖರ್ಚು ಭರಿಸುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ಈಗ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗಂಡನಿಗೆ ಹೇಳದೆ ಕೇಳದೆ ತಾಯಿ ಮನೆಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನಾನು ತಾಯಿ ಮನೆಗೆ ಹೋಗಿ ಮರಳಿ ಬಾರದ ಕಾರಣ ನನ್ನ ಗಂಡ ನನ್ನ ಮೇಲೆ ದೂರು ನೀಡಿದ್ದರು ಎಂದರೆ ಸರಿಯಲ್ಲ. ನಂತರ ನಾನು ಪೊ.ಠಾಣೆಯಲ್ಲಿ ಮುಚ್ಚಳಿಕೆ ಬರದುಕೊಟ್ಟು ಸ್ವಲ್ಪ ದಿನಗಳ ನಂತರ ಮತ್ತೆ ತಾಯಿ ಮನೆಗೆ ಹೋದೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ನಾನು ಸರಿಯಾಗಿ ಊಟ ಕೊಡದೆ ಬಟ್ಟೆ ತೊಳೆದು ಕೊಡದೇ ನಾನೇ ಕಿರುಕುಳ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಮಾತಿಗೆ ಬೆಲೆ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನಗೆ ಯಾವುದೇ ಕಿರುಕುಳ ನೀಡಿಲ್ಲ , ನಾನು ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾತಿನಂತೆ ಆರೋಪಿ ಬೇರೆ ಮನೆ ಮಾಡಿಕೊಂಡು ನನ್ನ ಜೊತೆ ಜೀವನ ನಡೆಸುತ್ತಿದ್ದ ಎಂದರೆ ಸರಿಯಲ್ಲ. ನನ್ನ ಮಗನ ಶಾಲೆಯ ಶುಲ್ಕವನ್ನು ನನ್ನ ಗಂಡ ಕಟ್ಟುತ್ತಿದ್ದರು, ನಾನು ಟ್ಯೂಷನ್ ಶುಲ್ಕ ಕಟ್ಟುತ್ತಿದ್ದೇ. ನನ್ನ ಗಂಡನ ನನ್ನ ಮಗನ ಎಲ್ಲಾ ಶಾಲಾ ಶುಲ್ಕ ಭರಿಸಿ,ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾನೇ ಗಲಾಟೆ ಮಾಡಿ, ಮಾನಸಿಕ ಹಿಂಸೆ ನೀಡುತ್ತಿದ್ದೇ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಚುನ್ನು ಸಾಕ್ಷಿಯಾಗಿ ಕಾಣಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಗಲಾಟೆ ಆಗಿದ್ದು ಬೇರೆ ಊರಿನಲ್ಲಿ ಎಂದು ಹೇಳಿರುತ್ತಾರೆ. ನನ್ನ ವರ್ತನೆ ಸರಿ ಇಲ್ಲದ್ದರಿಂದ ನನ್ನ ತಂದೆ ತಾಯಿ ಸಾಕ್ಷಿಯಾಗಿ ಬಂದಿಲ್ಲ ಎಂದರೆ ಸರಿಯಲ್ಲ. ಈಗ ನನ್ನ ತಂದೆ ತಾಯಿ ಜೊತೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಬಾಡಿಗೆ ಮನೆಗೆ ನನ್ನ ಗಂಡನೇ ನನ್ನನ್ನು ಕರೆದುಕೊಂಡು ಹೋಗಿ, ಬಾಡಿಗೆ ಕಟ್ಟುತ್ತಿದ್ದೆ ಎಂದರೆ ಸರಿಯಲ್ಲ. ನಾನು ಅವರ ಮಾತು ಕೇಳದೆ ಇದ್ದುದ್ದರಿಂದ ನನ್ನ ತಂದೆ ತಾಯಿ ದೂರ ಇದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ನನಗೆ ಗಂಡನ ಜೊತೆ ಹೊಂದಾಣಿಕೆ ಮಾಡಿಕೊಂಡು ಹೋಗು ಎಂದು ಹೇಳಿದ್ದರು ಸಹ ನಾನು ಅವರ ಮಾತು ಕೇಳಲಿಲ್ಲ ಎಂದರೆ ಸರಿಯಲ್ಲ.

ನನ್ನ ದೂರಿನಲ್ಲಿ ನಾನು ನಿರ್ದಿಷ್ಟವಾದ ದಿನಾಂಕ ಬರೆಸಿಲ್ಲ ಎಂದರೆ ಸರಿಯಲ್ಲ. ದೂರನ್ನು ಪೊ.ಠಾಣೆಯಲ್ಲಿ ಬೆರಳಚ್ಚು ಮಾಡಿಸಲಾಗಿದೆ. ಅಲ್ಲಿ ಮುನಿರಾಜು ಅಂತ ಪೋಲೀಸರು ಬರೆದುಕೊಂಡಿರುತ್ತಾರೆ. ಪೋಲೀಸರು ಬೆರಳಚ್ಚು ಮಾಡಿಸಿದ ಮೇರೆಗೆ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ದಿ: ೧೪.೦೨.೨೦೧೪ ರಂದು ನಾನು ದೂರು ನೀಡಿದ್ದೇನೆ. ಆ ದಿನ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸಣ್ಣ ಪುಟ್ಟ ಗಲಾಟೆಗಳು ಆಗುತ್ತಿತ್ತು ಎಂದು ಹೇಳಿರುತ್ತಾರೆ. ದೂರು ಕೊಟ್ಟ ದಿನದಂದು ನಾನು ಮಾಲೂರಿನಲ್ಲಿದ್ದೇ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ದೂರು ಕೊಟ್ಟ ನಂತರ ಪೊಲೀಸರು ಮತ್ತೆ ಬಂದಿದ್ದರು. ಚೂರು ಕೊಟ್ಟ ನಂತರ ಪೊಲೀಸರು ಮತ್ತೆ ವಿಚಾರಣೆಗೆ ಬಂದಿದ್ದರು. ಪೊಲೀಸರು ಬಂದು ಮತ್ತೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಪೊಲೀಸರು ಪೊ.ಠಾಣೆಯಲ್ಲಿ ಒಂದು ಮತ್ತು ಊರಿನಲ್ಲಿ ಒಂದು ಸಹಿ ಪಡೆದುಕೊಂಡಿರುತ್ತಾರೆ. ನಾನು ಸಹಿ ಮಾಡಿದಾಗ ಮನೆಯಲ್ಲಿ ಒಬ್ಬಳೆ ಇದ್ದೇ. ಪೊಲೀಸರು ಸ್ಥಳದಲ್ಲಿ ಯಾವುದೇ ಬರವಣಿಗೆ ಮಾಡಿಕೊಂಡಿಲ್ಲ. ನನ್ನ ಗಂಡ ಬೇರೆ ಮದುವೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಯಾವುದೇ ದಾಖಲೆಗಳು ಇಲ್ಲದಿದ್ದರು, ನನ್ನ ಗಂಡನ ಮೇಲೆ ವೈರತ್ವ ಸಾಧಿಸುವ ಉದ್ದೇಶದಿಂದ ನಾನು ಅವರ ಮೇಲೆ ಸುಳ್ಳು ಪ್ರಕರಣ ದಾಖಲಿಸಿ , ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಆರೋಪಿತರಿಗೆ ಮನೆ ಕಟ್ಟಲು ಐವತ್ತು ಸಾವಿರ ಕೊಟ್ಟಿದ್ದೇನೆ ಮತ್ತೊಮ್ಮೆ ಇಪ್ಪತ್ತು ಸಾವಿರ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆ ಕುರಿತು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಾನು ನನ್ನ ದೂರಿನಲ್ಲಿ ಆರೋಪಿತರು ಸೀಮೆ ಎಣ್ಣೆ ಹಾಕಿ ಸುಡಲು ಪ್ರಯತ್ನಿಸಿದರು ಎಂದು ಬರೆಸಿಲ್ಲ ಎಂದರೆ ಸರಿ. ನನ್ನ ಅತ್ತೆ ಮಾವ ನನ್ನನ್ನು ಹೊಡೆ ಬಡೆ ಮಾಡಿರುವುದನ್ನು ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಕೈ ಚೈನು, ಚೈನು, ಉಂಗುರ ವರದಕ್ಷಿಣೆಯಾಗಿ ಕೊಟ್ಟಿರುವುದನ್ನು ನಾನು ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಆ ಕುರಿತು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನನ್ನು ಮನೆಯಿಂದ ಹೊರ ಹಾಕಿರುವುದಾಗಿ ದೂರಿನಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿಯು ಬೇರೊಂದು ದೂರಿನಲ್ಲಿ ಬರೆಸಿದ್ದೇನೆ ಎಂದು ಹೇಳಿರುತ್ತಾರೆ. ಆರೋಪಿತರು ನನಗೆ ಯಾವುದೇ ತೊಂದರೆ ನೀಡದಿದ್ದರು ಸಹ , ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅತ್ತೆ ಮಾವ ನನ್ನ ಜೊತೆ ಇರಲಿಲ್ಲ, ನಾನು ಅವರ ಮೇಲೆ ಸುಳ್ಳು ದೂರು ದಾಖಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ತಿ ನೋಡಿ ಮದುವೆಯಾಗಿದ್ದು, ಆರೋಪಿಯೊಂದಿಗೆ ಜೀವನ ನಡೆಸುವ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು</u>**: ೪ ಮತ್ತು ೫ನೇ ಆರೋಪಿ ಪರ ಶ್ರೀ ಹೆಚ್.ಎಂ.ಎ ವಕೀಲರಿಂದ

೪ನೇ ಆರೋಪಿ ನನ್ನ ಗಂಡನ ಸ್ವಂತ ಅಕ್ಕ. ೫ನೇ ಆರೋಪಿ ಅವರ ಗಂಡ. ೪ ಮತ್ತು ೫ನೇ ಆರೋಪಿತರು ನಮ್ಮ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ. ಅವರು ನಮ್ಮ ಗಂಡನ ಜೊತೆ ವಾಸ ಇರಲಿಲ್ಲ ಎಂದರೆ ಸರಿ. ಅವರು ನನಗೆ ಯಾವುದೇ ಕಿರುಕುಳ ನೀಡಿಲ್ಲ ಎಂದರೆ ಸರಿ. ಅವರು ವರದಕ್ಷಿಣೆ ನೀಡುವಂತೆ ನನ್ನನ್ನು ಕೇಳಿಲ್ಲ ಎಂದರೆ ಸರಿ. ನನ್ನ ಗಂಡ ಮತ್ತು ೭ನೇ ಆರೋಪಿಗೆ ಯಾವುದೇ ಕುಮಕ್ಕನ್ನು ನಾಲ್ಕು ಮತ್ತು ಐದನೇ ಆರೋಪಿ ನೀಡಿಲ್ಲ ಎಂದರೆ ಸರಿ. ನಾಲ್ಕು ಮತ್ತು ಐದನೇ ಆರೋಪಿತರು ನಾನು ಮತ್ತು ನನ್ನ ಗಂಡ ಚೆನ್ನಾಗಿರುವಂತೆ ಹೇಳಿದ್ದಾರೆ ವಿನ: ಯಾವುದೇ ತೊಂದರೆ ನೀಡಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**